# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಕನಕಪುರ

## ಸಿಸಿ ನಂ.637/2018

| | | | |
|---|---|---|---|
| ಆರೋಪಿ | | ಡಿ.ಡಬ್ಲ್ಯೂ | **1** |
| ಹೆಸರು | | ಹರೀಶ್ ಆರ್.ಸಿ | |
| ತಂದೆಯ ಹೆಸರು | | ಚನ್ನಮಾರೇಗೌಡ | |
| ವಯಸ್ಸು | | **40**ವರ್ಷಗಳು | |
| ಉದ್ಯೋಗ | | ಮೊಬೈಲ್ ಅಂಗಡಿ | |
| ವಿಳಾಸ | | ರಾಯಸಂದ್ರ ಗ್ರಾಮ | |

ದಿನಾಂಕ.**20.02.2026**ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮದ್ಯಂತರ ಅರ್ಜಿ ಆದೇಶ ದಿನಾಂಕ.17.02.2026ರ ಆಧಾರದ ಮೇಲೆ**

**ಮುಖ್ಯವಿಚಾರಣೆ ಃ- ಆರೋಪಿ ಪರ ವಕೀಲರಿಂದಃ-**

ನಾನು ಬೂದಿಕೆರೆ ರಸ್ತೆಯಲ್ಲಿ ಸುಮುಖ್ ಕಮ್ಯೂನಿಕೇಷನ್ ಎಂಬ ಹೆಸರಿನ ಮೊಬೈಲ್ ಸೆಲ್ಸ್ ಮತ್ತು ಸರ್ವಿಸ್ ಅಂಗಡಿಯನ್ನು ಇಟ್ಟುಕೊಂಡಿರುತ್ತೇನೆ. **2016**ನೇ ಸಾಲಿನ ಡಿಸೆಂಬರ್ ತಿಂಗಳಿನಲ್ಲಿ ಸ್ಯಾಮ್‌ಸಂಗ್ ಕಂಪನಿಯವರು ಲೀಯಾ ಎಂಟರ್ ಪ್ರೈಸಸ್ ರವರು ಹೊಸ **Distributor** ಎಂದು ನನಗೆ ಪರಿಚಯ ಮಾಡಿಸಿಕೊಟ್ಟರು. ಸ್ಯಾಮ್

ಸಂಗ್ ಕಂಪನಿಯ ಮೊಬೈಲ್‌ಗಳಿಗೆ ಸಂಬಂಧಿಸಿದಂತೆ ಬಿಲ್ಲುಗಳನ್ನು ಮತ್ತು **accessories** ಗಳನ್ನು ಲೀಯಾ ಕಂಪನಿಯ ಮೂಲಕವೇ ಮಾಡಬೇಕೆಂದು ನನಗೆ ಸ್ಯಾಮ್‌ಸಂಗ್ ಕಂಪನಿಯವರು ತಿಳಿಸಿದರು. ಬಿಲ್ಲಿಂಗ್ ಪ್ರಾರಂಭಿಸುವುದಕ್ಕೂ ಮೊದಲು ತಲಾ **50**ಸಾವಿರ ರೂಪಾಯಿಗಳಿಗೆ ಸಂಬಂಧಿಸಿದಂತೆ ಒಟ್ಟು ನಾಲ್ಕು ಚೆಕ್ಕುಗಳನ್ನು ಲೀಯಾ ಕಂಪನಿಗೆ ನಾನು ಕೊಟ್ಟಿರುತ್ತೇನೆ. ಬಿಲ್ಲಿಂಗ್‌ನಲ್ಲಿ ನನಗೆ **12**ದಿನಗಳ ಕಾಲ ಕ್ರೇಡಿಟ್ ಕೊಟ್ಟಿರುತ್ತಾರೆ. ನಾನು ಎಲ್ಲಾ ಪೇಮೆಂಟ್ ನ್ನು ಚೆಕ್ಕು ಮೂಲಕ ಮತ್ತು ಆನ್‌ಲೈನ್ ಮೂಲಕವೇ ಮಾಡಿರುತ್ತೇನೆ. **2017** ರಿಂದ **2018**ರ ವರೆಗೆ ನಾನು ಒಟ್ಟು **14**ಲಕ್ಷದ **78**ಸಾವಿರದ **425** ರೂಪಾಯಿಯಷ್ಟು ವ್ಯವಹಾರ ಮಾಡಿರುತ್ತೇನೆ. ಈ ವ್ಯವಹಾರಕ್ಕೆ ಸಂಬಂಧಿಸಿದಂತೆ ನಾನು ಪೇಮೆಂಟನ್ನು ಆನ್‌ಲೈನ್ ಮೂಲಕ ಮತ್ತು ಚೆಕ್ ಮೂಲಕವೇ ಮಾಡಿರುತ್ತೇನೆ.

ಒಂದು ದಿನ ಪಿರ್ಯಾದುದಾರರ ಗಂಡ ಪೊಲೀಸರ ಜೊತೆ ನನ್ನ ಬಳಿ ಬಂದು ನನ್ನ ಮೇಲೆ ವಾರೆಂಟ್ ಆಗಿದೆ, ನಾನು ಬರಬೇಕೆಂದು ತಿಳಿಸಿದರು. ಆಗ ನನ್ನ ಬಳಿ ಇದ್ದ **50**ಸಾವಿರ ರೂಪಾಯಿ ಹಣ ಹಾಗೂ **1**ಲಕ್ಷದ **60**ಸಾವಿರ ರೂಪಾಯಿ ಬೆಲೆ ಬಾಳುವ ಸ್ಯಾಮ್‌ಸಂಗ್ ಮೊಬೈಲ್‌ಗಳನ್ನು ಅವರಿಗೆ ಆ ದಿನ ಕೊಟ್ಟಿರುತ್ತೇನೆ. ಆ ಸಮಯದಲ್ಲಿ ಪಿರ್ಯಾದುದಾರರ ಗಂಡ ಸ್ಟಾಕ್‌ನ್ನು ತೆಗೆದುಕೊಂಡಿರುತ್ತೇನೆ, ಪುನಃ ನಿನಗೆ ಏನು ಕೇಳುವುದಿಲ್ಲ ಎಂದು ಹೇಳಿ ಹೋಗಿರುತ್ತಾರೆ. ಪುನಃ ಪೊಲೀಸರು ನಮ್ಮ ಅಂಗಡಿಗೆ ಬಂದಿರುತ್ತಾರೆ. ಆಗ ನಾನು ವಕೀಲರ ಮೂಲಕ ಈ ಪ್ರಕರಣದಲ್ಲಿ ಹಾಜರಾಗಿರುತ್ತೇನೆ. ವಕೀಲರ ಮೂಲಕವೇ ಈ ಪ್ರಕರಣದ ಬಗ್ಗೆ ಗೊತ್ತಾಗಿರುತ್ತದೆ. ನನಗೆ ಯಾವುದೇ ನೋಟಿಸ್

ಬಂದಿರುವುದಿಲ್ಲ. ಆನ್‌ಲೈನ್ ಮೂಲಕ ಪೇಮೆಂಟ್ ಮಾಡಿದ ಚೆಕ್ಕುಗಳು ಅವರ ಬಳಿಯೇ ಉಳಿದುಕೊಂಡಿರುತ್ತವೆ. ಅವರು ಇದುವರೆಗೂ ಆ ಚೆಕ್ಕುಗಳನ್ನು ನನಗೆ ವಾಪಸ್ಸು ಕೊಟ್ಟಿರುವುದಿಲ್ಲ. ನಾನು ಭದ್ರತೆಗೆಂದು ಕೊಟ್ಟಂತಹ 50 ಸಾವಿರ ರೂಪಾಯಿಯ ಚೆಕ್ಕಿನಲ್ಲಿ 4ಲಕ್ಷ 50 ಸಾವಿರ ರೂಪಾಯಿಗಳೆಂದು ಬರೆದುಕೊಂಡು ನನ್ನ ವಿರುದ್ದ ಈ ಸುಳ್ಳು ಕೇಸು ಹಾಕಿರುತ್ತಾರೆ. ನಾನು ಪಿರ್ಯಾದುದಾರರಿಗೆ 4ಲಕ್ಷದ 50 ಸಾವಿರ ರೂಪಾಯಿ ಹಣ ಪಾವತಿಸಲು ಬಾದ್ಯಸ್ಥನಾಗಿರುವುದಿಲ್ಲ. ಈ ಸುಳ್ಳು ಪ್ರಕರಣದಿಂದ ನನ್ನನ್ನು ಬಿಡುಗಡೆ ಮಾಡಬೇಕಾಗಿ ಪ್ರಾರ್ಥನೆ.

**ಮುಂದುವರೆದ ಮುಖ್ಯವಿಚಾರಣೆಗೆ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದು, ಆಲಿಸಿ ಕಾಲಾವಕಾಶ ನೀಡಲಾಯಿತು.**

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಢೀಕರಿಸುತ್ತೇನೆ.)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**